ಮೇಲೆ ಹರವುತ್ತಿದ್ದನು. ಅದೇ ಸಮಯಕ್ಕೆ ಪಕ್ಕದಲ್ಲಿದ್ದ ಮಲಯಾಳಿ ಕುಟ್ಟಿಯ ಹೋಟಲಿನಿಂದ ಖಡಕ್ಕು ಚಾಯಿ ಸರಬರಾಜಾಗುತ್ತಿತ್ತು. ಚಹಾ ಸೇವಿಸುತ್ತ ಅವತ್ತಿನ ದಿನಪತ್ರಿಕೆಗಳ ಮೇಲೆ ಕಣ್ಣಾಡಿಸುತ್ತಿದ್ದ ಸಾಹೇಬರು ಅದಕ್ಕಾಗಿ ಬಹಳ ಸಮಯ ವೇಸ್ಟು ಮಾಡುತ್ತಿರಲಿಲ್ಲ. ಸೆಂಟ್ರಿಯನ್ನು ಕರೆದು ಯಾರ್‍ಯಾರು ತಮ್ಮ ಭೇಟಿಗೆ ಕಾಯುತ್ತಿದ್ದಾರೆಂದು ತಿಳಿದುಕೊಳ್ಳುತ್ತಿದ್ದರು.

ಊರಿನ ಓಣಿಯೋಣಿಗಳಲ್ಲಿ ರಣಕಲಿಗಳಂತೆ ಕಿತ್ತಾಡಿ ತಮ್ಮ ಷರಟು ಪಂಚೆಗಳನ್ನೆಲ್ಲಾ ಹರಿದುಕೊಂಡು ಬಂದವರೆಲ್ಲಾ ಅದೇ ವೇಷಭೂಷಣಗಳಲ್ಲಿ ಚಿತ್ತರಂಜನ ಸಾಹೇಬರ ಮುಂದೆ ಕತ್ತು ಬಗ್ಗಿಸಿ ಕೈಕಟ್ಟಿಕೊಂಡು ನಿಲ್ಲುತ್ತಿದ್ದುದು ಮತ್ತೊಂದು ಪ್ರೇಕ್ಷಣೀಯ ದೃಶ್ಯವಾಗಿರುತ್ತಿತ್ತು. ಕಣ್ಣೆತ್ತಿ ಸಾಹೇಬರನ್ನು ಒಮ್ಮೆಯಾದರೂ ದಿಟ್ಟಿಸಿದಲ್ಲಿ ಅವರನ್ನೇ ಎಂಟೆದೆ ಬಂಟರೆಂದು ಒಪ್ಪಿಕೊಂಡುಬಿಡಬಹುದಾಗಿತ್ತು. ಆದರೆ ಶೂಲಗಳಂತೆ ಇರಿಯುವ ಆ ನೋಟವನ್ನೂ, ಪೌರುಷದ ಪ್ರತೀಕದಂತಿರುವ ಆ ಹುಲುಸು ಮೀಸೆಯನ್ನೂ ನೋಡುವ ಧೈರ್ಯ ಸಾಮಾನ್ಯರಲ್ಲಿ ಅತಿಸಾಮಾನ್ಯರಾದ ಅವರಿಗೆ ಎಲ್ಲಿಂದ ಬಂದೀತು?

'ಹ್ಞೂ... ಏನ್ ನಡಸೀರಪ್ಪಾ ಭಾನಗಡಿ?... ಊರ ನೆಮ್ದೀನ ನುಂಗಿ ನೀರು ಕುಡೀಬೇಕಂತ ಮಾಡಿದ್ದೀರಾ ಹೆಂಗೆ?... ಹೆಂಡರು ಮಕ್ಕಳ ಜೊತಿ ಕುಳಿತು ಮನೀ ಊಟ ಮಾಡ್ತಾ ಇದ್ದೀರಲಾ... ಅದು ನಿಮಗಾ ಹಿಂಗ್ ಕುಣಿಸತೈತಿ ಅಂತ ಕಾಣತದೆ. ಸೊಲುಪ ಜೈಲಿನಾಗೆ ಕೂತು ಮುದ್ದೆ ಮುರಿದು ಬನ್ರಲಾ ಇನ್ನೂ ಚೆನ್ನಾಗಿರತೈತಿ ಏನು?...' ಅಂತ ಧ್ವನಿ ಎತ್ತರಿಸಿ ಕೇಳಿದರೆಂದರೆ ಸಾಕು, ಎದುರು ನಿಂತವನ ಮೈಯಿ ಅಲ್ಲೇ ನೀರು ಬಿಡುತ್ತಿತ್ತು. ಆತನ ಪರವಾಗಿ ವಶೀಲಿ ಮಾಡಲು ಬಂದ ಹಿರಿಯರು ಲೀಡರುಗಳೆನಿಸಿಕೊಂಡವರು, 'ನಾಲ್ಕು ಒದೀರಿ ಸಾರ್ ನನ್ಮಕ್ಕಳಿಗೆ... ತಿಂದಿರೋ ಇಟ್ಟು ಎಚ್ಚಾಗಿ ಇವೆಲ್ಲಾ ಮಾಡ್ಕಳತ ಕುಂತವ್ರೆ...' ಅಂತ ಸಾಹೇಬರ ಮಾತಿಗೆ ಜಿಂಝಾಕು ಬಾರಿಸುತ್ತಲೇ ಮೆತ್ತಗೆ, 'ಹೊಟ್ಟೆಗಿಲ್ಲ, ಬಟ್ಟೆಗಿಲ್ಲ... ಮಾಡಾದು ಕೂಲಿ ಕೆಲಸ. ಕೋರ್ಟು ಕಚೇರಿ ಎಲ್ಲಾ ಬ್ಯಾಡಾ ಬುಡೀ ಸಾರ್, ದಯೆ ತೋರಿ ನಾಲ್ಕು ಬುದ್ಧಿ ಮಾತು ಹೇಳಿ ಕಳಿಸಿಬುಡಿ... ಮುಂದಕ್ಕ ತಪ್ ನಡೀದಂಗೆ ನಾವು ನೋಡಿಕ್ಕತೀವಿ...' ಎಂಬ ವಿನಂತಿಯನ್ನೂ ಜೊತೆಗಿಡುತ್ತಿದ್ದರು. ಸಂದರ್ಭಾನುಸಾರವಾಗಿ ಸಾಹೇಬರು ಕೆಲವನ್ನು ಪುರಸ್ಕರಿಸುತ್ತಿದ್ದರು, ಕೆಲವನ್ನು ಇಲ್ಲ. ಅದಕ್ಕೆ ಅವರದೇ ಆದ ಸಮರ್ಥನೆಗಳನ್ನು ಆನಂತರ ನಮ್ಮ ಮುಂದೆ ವಿವರಿಸುತ್ತಿದ್ದುದು ಬೇರೆ ವಿಷಯ!

ಇನ್ನು ಕಳ್ಳನೇನಾದರೂ ವಿಚಾರಣೆಗೆಂದು ಸಾಹೇಬರ ಮುಂದೆ ನಿಂತನೆಂದರೆ ಅವರ ಠೀವಿ ಠಿಕಾಣಿ ನೋಡಿಯೇ ತಪ್ಪನ್ನು ಒಪ್ಪಿಕೊಂಡುಬಿಡಬೇಕು ಹಾಗಿರುತ್ತಿತ್ತು ಅವರ ಆಸ್ಥಾನ ಭಂಗಿ. ಅಪರಾಧ ವಿಭಾಗದ ಸಿಬ್ಬಂದಿಗಳು ಮೊದಲೇ ಅಂತಹವನನ್ನು ಪಕ್ಕಕ್ಕೆ ಕರೆದು, 'ಸಾಹೇಬರ ಮುಂದೆ ನಾಟ್ಕಾ ನಕರಾಗಳೆಲ್ಲಾ ನಡಿಯಾಕಿಲ್ಲ... ಸುಮ್ನೆ ಏನೈತೋ ಅದ್ನ ಹೇಳ್ಬುಟ್ಟು ಹೊರಕ್ಕೆ ಬಂದುಬುಡು... ಅವರ ತಲೆ ಕೆಡುತು ಅಂದ್ರ ಆಮೇಲೆ ನಿನ್ಗೆ ಅದೇನ್ ಗತಿ ಮಾಡ್ತಾರೋ ಗೊತ್ತಿಲ್ಲ...' ಅನ್ನುವ ಪೀಠಿಕೆಯನ್ನು ಹಾಕುತ್ತಿದ್ದರು ಬೇರೆ. ಹೀಗಾಗಿ ಕಳ್ಳನಿಗೆ ಬೇರೆ ಆಯ್ಕೆಯೇ ಇರುತ್ತಿರಲಿಲ್ಲ. ಅಂಥ ಸನ್ನಿವೇಶದಲ್ಲೂ ನಸುಗುನ್ನಿಯಂತಾಡುವ ಕೆಲವು ನಾಟಿಕಳ್ಳರಿಗೆ ಕೊಂಚ ದನಿ ಏರಿಸಿ, 'ಯಾಕೋಲೇ ಬದ್ಮಾಶ್... ನಿಜ ಬೊಗಳ್ತೀಯಾ? ಇಲ್ಲಾ... ಕುಂತಲ್ಲಿಂದ ನಾನು ಮ್ಯಾಲೆದ್ದು ಬರಬೇಕಾ?...' ಅಂತ ಸೀಟಿನ ಮೇಲಿಂದಲೇ ಕೊಂಚ ಬುಡ ಎತ್ತರಿಸಿ ಎದ್ದು ಬರುವಂತೆ ಯಾಕ್ಷನ್ ಮಾಡಿದರೆ ಮುಗಿಯಿತು, ಆ ಬಡಪಾಯಿ ಕಳ್ಳ ಈಗಿನದ್ದಲ್ಲದೆ ಹಿಂದಿನದೂ ಒಂದೆರೆಡು ತುಡುಗುಗಳನ್ನು ಸೇರಿಸಿ ಒಪ್ಪಿಕೊಂಡುಬಿಡುತ್ತಿದ್ದ... ಹಂಗಿರುತ್ತಿತ್ತು ಪ್ರಹಸನ!

ಅಸಲಿ ವಿಷಯ ಏನಪಾ ಅಂದರೆ ಇಲ್ಲೀವರೆಗೆ ಸಾಹೇಬರು ಯಾರ ಮೇಲೂ ಕೈ